## ಕರ್ನಾಟಕ ಸರ್ಕಾರದ ನಡವಳಿಗಳು

(118)

**ವಿಷಯ:** ಶ್ರೀ ಎಸ್.ಆರ್. ಕೊಣ್ಣೂರು, ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಇವರ ಅನಧಿಕೃತ ಗೈರು ಹಾಜರಿಯ ಬಗ್ಗೆ ಶಿಸ್ತು ಕ್ರಮ.

**ಓದಲಾಗಿದೆ:**

1) ಆಯುಕ್ತರು, ಕೃಷಿ ಇಲಾಖೆ, ಇವರ ಪತ್ರ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-4/ಇತರೆ/2010-11, ದಿನಾಂಕ:22-05-2012.
2) ಸರ್ಕಾರದ ಕಾರಣ ಕೇಳುವ ಪತ್ರದ ಸಂಖ್ಯೆ: ಕೃಇ 45 ಕೃಪವಿ 2011, ದಿನಾಂಕ:10-08-2012.
3) ಸರ್ಕಾರದ ಆದೇಶ ಸಂಖ್ಯೆ: ಕೃಇ 45 ಕೃಪವಿ 2011, ದಿನಾಂಕ:08-04-2013.
4) ವಿಚಾರಣಾಧಿಕಾರಿಯವರ ವರದಿ ದಿನಾಂಕ:02-01-2014.
5) 2ನೇ ಕಾರಣ ಕೇಳುವ ಪತ್ರ ಸಂಖ್ಯೆ: ಕೃಇ 45 ಕೃಪವಿ 2011, ದಿನಾಂಕ: 15-02-2014.
6) ಶ್ರೀ ಎಸ್.ಆರ್. ಕೊಣ್ಣೂರು, ಜಂಟಿ ಕೃಷಿ ನಿರ್ದೇಶಕರು, ಇವರ ಲಿಖಿತ ಉತ್ತರ ದಿನಾಂಕ:15-03-2014

*********

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ: (1)ರಲ್ಲಿ ಓದಲಾದ ಪತ್ರದಲ್ಲಿ, ಆಯುಕ್ತರು, ಕೃಷಿ ಇಲಾಖೆ, ಬೆಂಗಳೂರು, ಇವರು ಶ್ರೀ ಎಸ್.ಆರ್. ಕೊಣ್ಣೂರು, ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಇವರು ಇಲಾಖಾ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಚರ್ಚಿಸಲು ನಡೆದ ಮಾಸಿಕ ಸಭೆಗಳಿಗೆ ಅನಧಿಕೃತ ಗೈರು ಹಾಜರಾಗಿರುವುದಲ್ಲದೆ, ಇಲಾಖಾ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲರಾಗಿರುತ್ತಾರೆ, ಮತ್ತು ದಿನಾಂಕ: 16-06-2011 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ ಎಂದು ಆಪಾದಿಸಿ ಅವರ ಮೇಲೆ ಶಿಸ್ತು ಕ್ರಮ ಕೈಗೊಳ್ಳಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಕೃಷಿ ಆಯುಕ್ತರ ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರ ಶ್ರೀ ಎಸ್.ಆರ್. ಕೊಣ್ಣೂರು, ಜಂಟಿ ಕೃಷಿ ನಿರ್ದೇಶಕರು, ರವರಿಗೆ ಕ್ರಮಾಂಕ (2)ರಲ್ಲಿ ಓದಲಾದ ಸರ್ಕಾರದ ಕಾರಣ ಕೇಳುವ ಪತ್ರದೊಂದಿಗೆ ದೋಷಾರೋಪಣ ಪಟ್ಟಿಯನ್ನು ಜಾರಿ ಮಾಡಿ, ಸದರಿ ದೋಷಾರೋಪಣ ಪಟ್ಟಿಗೆ ಅವರು ನೀಡಿದ ಹೇಳಿಕೆಗಳನ್ನು ಪರಿಶೀಲಿಸಿದ ನಂತರ ಮೇಲೆ ಕ್ರಮಾಂಕ: (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಶ್ರೀ ಎಂ.ಜಿ. ಹಿರೇಮಠ್, ನಿವೃತ್ತ ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಧೀಶರು ಬೆಂಗಳೂರು, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಶ್ರೀ ಮಧುಸೂಧನ ಮೂರ್ತಿ, ಆಡಳಿತಾಧಿಕಾರಿ, ಕೃಷಿ ಆಯುಕ್ತರ ಕಛೇರಿ, ಬೆಂಗಳೂರು ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ಕ್ರಮಾಂಕ (4)ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣಾಧಿಕಾರಿಗಳು ಪ್ರಕರಣದ ವಿಚಾರಣೆ ನಡೆಸಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಅವರು ತಮ್ಮ ವರದಿಯಲ್ಲಿ ವಿಚಾರಣೆಗೆ ಗುರಿಪಡಿಸಿದ ಶ್ರೀ ಎಸ್.ಆರ್. ಕೊಣ್ಣೂರು, ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ, ಇವರ ಮೇಲಿನ ಆರೋಪ ರುಜುವಾತಾಗಿರುತ್ತದೆ, ಎಂಬುದಾಗಿ ನಿರ್ಣಯ ನೀಡಿರುವ ಹಿನ್ನೆಲೆಯಲ್ಲಿ ಮೇಲೆ ಕ್ರಮಾಂಕ (5)ರಲ್ಲಿ ಓದಲಾದ 2ನೇ ಕಾರಣ ಕೇಳುವ ಪತ್ರದಲ್ಲಿ ವಿಚಾರಣಾ ವರದಿಯ ಮೇಲೆ ಹೇಳಿಕೆ ಏನಾದರೂ ಇದ್ದರೆ ಸಲ್ಲಿಸುವಂತೆ ಕೋರಲಾಗಿತ್ತು.

ಕ್ರಮಾಂಕ (6)ರಲ್ಲಿ ಓದಲಾದ ಪತ್ರದಲ್ಲಿ ಶ್ರೀ ಎಸ್.ಆರ್. ಕೊಣ್ಣೂರು, ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ, 2010-11ನೇ ಸಾಲಿನ ಅವಧಿಯಲ್ಲಿ ಇಲಾಖೆಯ ಕಾರ್ಯಕ್ರಮವನ್ನು ಸಮರ್ಪಕವಾಗಿ ನಿರ್ವಹಿಸಿರುತ್ತೇನೆ. ಇಲಾಖೆ ಮತ್ತು ಇಲಾಖೇತರ ಮುಖ್ಯಸ್ಥರು ಕರೆದ ಸಭೆಗಳಿಗೆ ಹಾಜರಾಗಲು ಪ್ರಾಮಾಣಿಕವಾಗಿ ಪ್ರಯತ್ನಿಸಿರುತ್ತೇನೆ. ಆದಾಗ್ಯೂ ಕೆಲವೊಂದು ವೇಳೆ ಒಂದೇ ದಿವಸ ಹೆಚ್ಚಿನ ಸಂಖ್ಯೆಯ ಸಭೆಗಳು ನಿಗದಿಗೊಂಡಿದ್ದ ಸಂಧರ್ಭದಲ್ಲಿ ನನ್ನ ಪರವಾಗಿ ಸಭೆಗಳಲ್ಲಿ ಭಾಗವಹಿಸಲು ನನ್ನ ಅಧೀನ ಅಧಿಕಾರಿಗಳನ್ನು ಕಳುಹಿಸಲಾಗಿದೆ. ರಾಜ್ಯ ವಲಯ, ಜಿಲ್ಲಾ ವಲಯ ಹಾಗೂ ಕೇಂದ್ರ ಪುರಸ್ಕೃತ ಯೋಜನೆಗಳಡಿಯ ಕಾರ್ಯಕ್ರಮಗಳನ್ನು, ಜಿಲ್ಲೆಗೆ ನಿಗಧಿಪಡಿಸಿದ ಗುರಿಗಳನ್ನು ಸಾಧಿಸಲು ಪ್ರಾಮಾಣಿಕ ಪ್ರಯತ್ನವನ್ನು ಮಾಡಿರುತ್ತೇನೆ. ಆದ್ದರಿಂದ ವಿಚಾರಣಾ ವರದಿಯನ್ನು ಒಪ್ಪದೆ ತಮ್ಮನ್ನು ಆರೋಪಗಳಿಂದ ಮುಕ್ತರನ್ನಾಗಿಸುವಂತೆ ತಮ್ಮ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ವಿಚಾರಣಾಧಿಕಾರಿಗಳು ತಮ್ಮ ವರದಿಯಲ್ಲಿ, ಆರೋಪಿತ ಅಧಿಕಾರಿಯವರ ವಿರುದ್ಧದ ಆರೋಪವನ್ನು ಸಾಬೀತು ಪಡಿಸಲು, 1ನೇ ಸಾಕ್ಷಿದಾರದ ಶ್ರೀಮತಿ ಸಿ.ಎನ್. ನಂದಿನಿಕುಮಾರಿ, ಜಂಟಿ ಕೃಷಿ ನಿರ್ದೇಶಕರು ಇವರು ಆಪಾದಿತರ ವಿರುದ್ಧ ಮಾಡಿದ ಆರೋಪದ ಬಗ್ಗೆ ಯಾವುದೇ ಸಾಕ್ಷಿ ನುಡಿದಿರುವುದಿಲ್ಲವೆಂದು ನಮೂದಿಸಿ, ಇದು ಮಂಡನಾಧಿಕಾರಿಗಳಿಗೆ ಯಾವುದೇ ರೀತಿಯಲ್ಲಿ ಸಹಾಯಕಾರಿಯಾಗುವುದಿಲ್ಲವೆಂದು ಅಭಿಪ್ರಾಯಿಸಿರುತ್ತಾರೆ. 2ನೇ ಸಾಕ್ಷಿದಾರರಾದ ಶ್ರೀಮತಿ ಡಿ.ವಿ. ನಾಗರತ್ನಮ್ಮ, ಆಡಳಿತ ಅಧಿಕಾರಿ, ಇವರು ಸಾಕ್ಷಿಯಲ್ಲಿ, ಆಪಾದಿತರು ಮಾಸಿಕ ಸಭೆಗಳಿಗೆ ಗೈರು ಹಾಜರಾಗಿರುವ ಬಗ್ಗೆ, ಇಲಾಖಾ ಯೋಜನೆಗಳನ್ನು ಅನುಷ್ಠಾನಗೊಳಿಸಲು ವಿಫಲರಾಗಿರುವ ಬಗ್ಗೆ ಯಾವುದೇ ಮಾಹಿತಿಯಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ, ನಿಶಾನೆ ಪಿ-3 ಕೃಷಿ ನಿರ್ದೇಶಕರು ಆಪಾದಿತರಿಗೆ ಜಾರಿ ಮಾಡಿದ್ದ ನೋಟಿಸ್‌ನ ದಿನಾಂಕ:21-01-2011 ಗಮನಿಸಿದಾಗ

ಆಪಾದಿತರು ಮಾಸಿಕ ಸಭೆಗಳಿಗೆ ಗೈರು ಹಾಜರಾಗುತ್ತಿರುವುದು ಮತ್ತು ಇಲಾಖೆಯ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲರಾಗಿರುವ ಬಗ್ಗೆ ನಮೂದಿಸಿದ್ದು, ನಿಶಾನೆ ಪಿ–4 ಆಪಾದಿತರಿಗೆ ಮೇಲ್ಕಾಣಿಸಿದ ವಿಚಾರಕ್ಕೆ ವಿವರಣೆಯನ್ನು ನೀಡುವಂತೆ ಸೂಚಿಸಿರುವ ಎರಡನೇ ನೋಟಿಸ್‌ಗೆ ಅಧಿಕಾರಿಯವರು ಯಾವುದೇ ವಿವರಣೆ ನೀಡಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ, ನಿಶಾನೆ ಪಿ–3 ಮತ್ತು 4 ಎಂದು ಗುರುತಿಸಿರುವ ನೋಟೀಸ್‌ಗಳ ಆಧಾರದ ಮೇಲೆ ಆಪಾದಿತರು ಮಾಸಿಕ ಸಭೆಗಳಿಗೆ ಗೈರು ಹಾಜರಾಗಿರುವುದು ಮತ್ತು ಇಲಾಖೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲರಾಗಿರುವುದು ಕಂಡುಬರುತ್ತದೆ.

ನಿಶಾನೆ ಪಿ–1 ಎಂದು ಗುರುತಿಸಿರುವ ಏಪ್ರಿಲ್ ಮಾಹೆಯ ಹಾಜರಾತಿಯ ವಹಿಯನ್ವಯ, ಆಪಾದಿತರು ದಿನಾಂಕ;6–04–2011 ರಿಂದ 30–04–2011 ರವರೆಗೆ ಗೈರು ಹಾಜರಾಗಿರುವುದು, ನಿಶಾನೆ ಪಿ–5 ಎಂದು ಗುರುತಿಸಿರುವ ಜೂನ್ 2011 ಮಾಹೆಯ ಹಾಜರಾತಿ ವಹಿ ನಕಲಿನಲ್ಲಿ, ಆಪಾದಿತರು ಪೂರ್ತಿ ತಿಂಗಳು ಗೈರು ಹಾಜರಾಗಿರುವುದು, ನಿಶಾನೆ ಪಿ–6 ರ ಜುಲೈ 2011 ಹಾಜರಾತಿ ವಹಿಯಲ್ಲಿ ಆಪಾದಿತರ ಹೆಸರನ್ನು ಕಾಣಿಸಿರುವುದಿಲ್ಲ, ಆಪಾದಿತರ ಕಛೇರಿಯ ಪ್ರಭಾರವನ್ನು ಶ್ರೀಮತಿ ಸಿ.ಎನ್.ನಂದಿನಿಕುಮಾರಿಯವರು ವಹಿಸಿಕೊಂಡಿದ್ದ ಕಾರಣ, ಅವರು ರುಜು ಮಾಡಿರುತ್ತಾರೆ. ದಿನಾಂಕ:29–08–2011ರಂದು ಆಪಾದಿತರನ್ನು ಮೇಲ್ಕಾಣಿಸಿದ ಕಾರಣಗಳಿಗಾಗಿ ಅಮಾನತ್ತುಗೊಳಿಸಿರುವುದನ್ನು ಆರೋಪದಲ್ಲಿ ಕಾಣಿಸಲಾಗಿದೆ. ಆಪಾದಿತರು ಮೇ 1 ರಿಂದ ಮೇ 31 ರವರೆಗೆ ಗೈರು ಹಾಜರಾಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನಿಶಾನೆ ಪಿ–2 ರ ಸರ್ಕಾರಿ ಅಧಿಸೂಚನೆ ದಿನಾಂಕ:09–06–2011 ರಲ್ಲಿ ಆಪಾದಿತರು ಅನಾರೋಗ್ಯದ ನಿಮಿತ್ತ ರಜೆಯ ಮೇಲೆ ಇರುವುದರಿಂದ ಅವರ ಸ್ಥಾನದಲ್ಲಿ ಶ್ರೀಮತಿ ಸಿ.ಎನ್.ನಂದಿನಿಕುಮಾರಿ, ಜಂಟಿ ಕೃಷಿ ನಿರ್ದೇಶಕರನ್ನು ಅಧಿಕ ಪ್ರಭಾರದಲ್ಲಿರಿಸಿ ಆದೇಶಿರುವ ಬಗ್ಗೆ ಉಲ್ಲೇಖಿಸಿ, ಆಪಾದಿತರು ಮೊದಲನೇ ವಿಚಾರಣೆಗೆ ಹಾಜರಾಗಿ ಅವರ ವಿರುದ್ಧ ಆರೋಪಗಳನ್ನು ನಿರಾಕರಿಸಿ ಹೋದ ನಂತರ, ಮುಂದೇ ಸತತವಾಗಿ ವಿಚಾರಣೆಗೆ ಹಾಜರಾಗಿರುವುದಿಲ್ಲ ಮತ್ತು ಮಂಡನಾಧಿಕಾರಿಗಳು ವಿಚಾರಿಸಿದ ಇಬ್ಬರೂ ಸಾಕ್ಷಿದಾರರ ಸಾಕ್ಷಿಯನ್ನು ಹಾಗೂ ನಿಶಾನೆ ಪಿ–1 ರಿಂದ ಪಿ–8 ದಾಖಲೆಗಳನ್ನು ನಿರಾಕರಿಸಿಲ್ಲ. ಆದ್ದರಿಂದ, ಆಪಾದಿತರ ವಿರುದ್ಧದ ಆರೋಪವು ಮಂಡನಾಧಿಕಾರಿಗಳು ನೀಡಿದ ಮೌಖಿಕ ಮತ್ತು ಲಿಖಿತ ದಾಖಲೆಗಳ ಆಧಾರದ ಮೇಲೆ ಸಾಬೀತಾಗಿದೆ ಎಂದು ತೀರ್ಮಾನಿಸಿ ವಿಚಾರಣಾ ವರದಿಯನ್ನು ಸಲ್ಲಿಸಿರುತ್ತಾರೆ.

ಶ್ರೀ ಎಸ್.ಆರ್. ಕೊಣ್ಣೂರು, ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದರಿಂದ ಅವರಿಗೆ ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ)ನಿಯಮಾವಳಿ 1957ರ ನಿಯಮ 8(VI)ರಡಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕೃಇ 45 ಕೃಪವಿ 2011**
**ಬೆಂಗಳೂರು, ದಿನಾಂಕ: 18-07-2014**

ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳಿಂದಾಗಿ ಶ್ರೀ ಎಸ್.ಆರ್. ಕೊಣ್ಣೂರು, ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ, ಇವರು ಇಲಾಖಾ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ಚರ್ಚಿಸಲು ನಡೆದ ಮಾಸಿಕ ಸಭೆಗಳಿಗೆ ಅನಧಿಕೃತ ಗೈರು ಹಾಜರಾಗಿರುವುದಲ್ಲದೆ, ಇಲಾಖಾ ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ವಿಫಲರಾಗಿರುತ್ತಾರೆ, ಮತ್ತು ದಿನಾಂಕ: 16-06-2011 ರಿಂದ ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ ಎಂಬ ಆರೋಪಗಳು ಸಾಬೀತಾಗಿರುವುದರಿಂದ ಇವರಿಗೆ ಈ ಕೂಡಲೇ ಜಾರಿಗೆ ಬರುವಂತೆ ಕರ್ನಾಟಕ ನಾಗರಿಕ ಸೇವಾ (ಸಿ.ಸಿ.ಎ)ನಿಯಮಾವಳಿ 1957ರ ನಿಯಮ 8(VI)ರಡಿ ಸೇವೆಯಿಂದ ಕಡ್ಡಾಯ ನಿವೃತ್ತಿಗೊಳಿಸುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕ ಪತ್ರ ಮತ್ತು ಲೆಕ್ಕ ತಪಾಸಣೆ ಜಿಇ-05), ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು.
3) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
4) ಜಂಟಿ ಕೃಷಿ ನಿರ್ದೇಶಕರು, ಬೆಂಗಳೂರು ಗ್ರಾಮಾಂತರ, ಬೆಂಗಳೂರು.
5) ಮಾನ್ಯ ಕೃಷಿ ರಾಜ್ಯ ಸಚಿವರ ಆಪ್ತ ಕಾರ್ಯದರ್ಶಿ, ವಿಕಾಸಸೌಧ, ಬೆಂಗಳೂರು.
6) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
7) ಶ್ರೀ ಎಸ್.ಆರ್. ಕೊಣ್ಣೂರ, ಜಂಟಿ ಕೃಷಿ ನಿರ್ದೇಶಕರು, # 682, ವೀರಣ್ಣ ಲೇಔಟ್, ದಾಸರಹಳ್ಳಿ, ಹೆಬ್ಬಾಳ ಪೋಸ್ಟ್, ಬೆಂಗಳೂರು-24 (ಕೃಷಿ ಆಯುಕ್ತರ ಮೂಲಕ)
8) ಸರ್ಕಾರದ ಉಪ ಕಾರ್ಯದರ್ಶಿ-1, ಕೃಷಿ ಇಲಾಖೆ.
9) ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.